# 50 ಲಕ್ಷಕ್ಕಿಂತ ಹೆಚ್ಚಿನ ಜೀವನಗಳನ್ನು ಪರಿವರ್ತಿಸಿದ ಕ್ವಿಕ್ ಹೀಲ್ ಫೌಂಡೇಶನ್




ಬೆಂಗಳೂರು: ಜಾಗತಿಕ ಸೈಬರ್ ಸುರಕ್ಷಾ ಪರಿಹಾರಗಳನ್ನು ಒದಗಿಸುವ ಸಂಸ್ಥೆಯಾದ ಕ್ವಿಕ್ ಹೀಲ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸಿಎಸ್‌ಆರ್ ಅಂಗವಾದ ಕ್ವಿಕ್ ಹೀಲ್ ಫೌಂಡೇಶನ್, ಮಹಾರಾಷ್ಟ್ರದ ಪುಣೆಯಲ್ಲಿ ಫೆಬ್ರವರಿ 10ರಂದು 'ಸೈಬರ್ ಸುರಕ್ಷೆಗಾಗಿ ಸೈಬರ್ ಶಿಕ್ಷ ಪ್ರಶಸ್ತಿಗಳು'ದ 2024ರ ಆವೃತ್ತಿಯನ್ನು ನಡೆಸಿಕೊಟ್ಟಿತು. ತನ್ನ ಪ್ರಧಾನ ಉಪಕ್ರಮವಾದ 'ಸೈಬರ್ ಸುರಕ್ಷೆಗಾಗಿ ಸೈಬರ್ ಶಿಕ್ಷಣ'ದಲ್ಲಿ ಭಾಗವಹಿಸಿದ ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅಮೋಘ ಶ್ರಮಗಳನ್ನು ಈ ಸಮಾರಂಭವು ಗುರುತಿಸಿತು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕ್ವಿಕ್ ಹೀಲ್ ಫೌಂಡೇಶನ್‌ನ ಚೇರ್‌ಪರ್ಸನ್ ಮಿಸ್ ಅನುಪಮ ಕಾಟ್ಕರ್, ಜಲಗಾಂವ್‌ನ ಕವಯಿತ್ರಿ ಬಹಿನಬಾಯಿ ಚೌಧರಿ ಉತ್ತರ ಮಹಾರಾಷ್ಟ್ರ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ವಿ.ಎಲ್. ಮಹೇಶ್ವರಿ, ಪುಣ್ಯಶ್ಲೋಕ್ ಅಹಿಲ್ಯಾದೇವಿ ಹೋಲ್ಕರ್ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ(ಡಾ॥)ಪ್ರಕಾಶ್ ಎ. ಮಹಾನ್ವರ್, ಮಹಾರಾಷ್ಟ್ರ ಸೈಬರ್‌ನ ಪೋಲಿಸ್ ಅಧೀಕ್ಷಕ ಶ್ರೀ ಸಂಜಯ್ ಶಿಂತ್ರೆ ಹಾಗೂ 29 ಭಾಗವಹಿಸಿದ ಸಂಸ್ಥೆಗಳಿಂದ ಶಿಕ್ಷಣ ತಜ್ಞರು ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡುತ್ತಾ, ಕ್ವಿಕ್ ಹೀಲ್‌ನ ಚೀಫ್ ಆಫ್ ಆಪರೇಶನಲ್ ಎಕ್ಸೆಲೆನ್ಸ್ ಮತ್ತು ಕ್ವಿಕ್ ಹೀಲ್ ಫೌಂಡೇಶನ್‌ನ ಚೇರ್‌ಪರ್ಸನ್ ಮಿಸ್ ಅನುಪಮ ಕಾಟ್ಕರ್, "50 ಲಕ್ಷಕ್ಕಿಂತ ಹೆಚ್ಚಿನ ಜನರ ಜೀವನವನ್ನು, ಅದರಲ್ಲೂ ವಿಶೇಷವಾಗಿ ದೇಶದ ಯಾವುದೋ ಮೂಲೆಮೂಲೆಗಳಲ್ಲಿ ವಾಸಿಸುತ್ತಿರುವವರ ಜೀವನವನ್ನು ನಮ್ಮ ಸಿಎಸ್‌ಆರ್ ಉಪಕ್ರಮಗಳ ಧನಾತ್ಮಕ ಪ್ರಭಾವದ ಪರಿಣಾಮಗಳನ್ನು ಹಂಚಿಕೊಳ್ಳಲು ನನಗೆ ಬಹಳ ಹೆಮ್ಮೆಯಾಗುತ್ತಿದೆ. ಮೂಲಕ ಈ ಸಾಧನೆಯನ್ನು ಸ್ಮರಿಸಿಕೊಳ್ಳುವುದಕ್ಕೆ, ಸೈಬರ್ ಸುರಕ್ಷೆಗಾಗಿ ಸೈಬರ್ ಶಿಕ್ಷಣ' ಪ್ರಶಸ್ತಿಗಳ 2024ರ ಆವೃತ್ತಿಗಿಂತ ಉತ್ತಮವಾದ ಸಂದರ್ಭವಿಲ್ಲ. ಈ ಅವಿಸ್ಮರಣೀಯ ಸಮಾರಂಭವು, ಜನರಿಗೆ ಸೈಬರ್ ಸುರಕ್ಷತೆ-ಯ ಅತಿಮುಖ್ಯ ಸಂದೇಶವನ್ನು ಹರಡಲು ನಿದರ್ಶನೀಯ ಬದ್ಧತೆ ಪ್ರದರ್ಶಿಸಿದ ಸ್ವಯಂಸೇವಾ ಸಂಸ್ಥೆಗಳು, ನಿಬದ್ಧವಾದ ಶಿಕ್ಷಕರು ಹಾಗೂ ಉತ್ಸಾಹೀ ವಿದ್ಯಾರ್ಥಿಗಳ ಅಮೂಲ್ಯ ಕೊಡುಗೆಗಳನ್ನು ಗುರುತಿಸುತ್ತದೆ ಮಾತ್ರವಲ್ಲ, ನಮ್ಮ ದೇಶದ ಭವಿಷ್ಯತ್ತಿನ ನಾಯಕರುಗಳಾದ ಯುವಜನತೆಗೆ ಪ್ರೇರಣೆ ಒದಗಿಸಿ ಅವರನ್ನು ಸಬಲಗೊಳಿಸಬೇಕೆನ್ನುವ ನಮ್ಮ ಅಚಲ ಬದ್ಧತೆಗೂ ಪುರಾವೆಯಾಗಿದೆ. ಎಲ್ಲರಿಗೂ ಮೂಲಭೂತ ಹಕ್ಕಾಗಿ ಸೈಬರ್ ಸುರಕ್ಷತೆ'ಯ ನಮ್ಮ ಧ್ಯೇಯೋದ್ದೇಶವನ್ನು ಸ್ಥಾಪಿಸಲು ನಮಗೆ ಬೆಂಬಲ ಒದಗಿಸಿದ ನಮ್ಮ ಎಲ್ಲಾ ಭಾಗೀದಾರರು, ಸ್ಥಳೀಯ ರಾಜ್ಯ ಆಡಳಿತಗಳು, ಪೋಲಿಸ್, ಮಹಾರಾಷ್ಟ್ರ ಸೈಬರ್, ಮತ್ತು ನ್ಯಾಸ್‌ಕಾಮ್(Nasscom) ಒಳಗೊಂಡಂತೆ, ಕೈಗಾರಿಕಾ ಮಂಡಳಿಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದುಗೂಡಿ, ಸೈಬರ್ ಸುರಕ್ಷಿತವಾದ ಮತ್ತು ಸುಭದ್ರವಾದ ಭಾರತವನ್ನು ರೂಪಿಸುವ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಜನರು ನಮ್ಮನ್ನು ಸೇರಿಕೊಳ್ಳುವುದಕ್ಕೆ ಪ್ರೋತ್ಸಾಹ ನೀಡುವಂತಹ ಒಂದು ಸಂಚಲನೆಯನ್ನು ಉಂಟು ಮಾಡುವ ಆಶಯ ನಮ್ಮದು." ಎಂದು ಹೇಳಿದರು. ಹಲವಾರು ಪ್ರಭಾವಶಾಲಿ ಕಾರ್ಯಕ್ರಮಗಳು ಹಾಗೂ ಪ್ರಚಾರಗಳ ಮೂಲಕ ಸಮುದಾಯ ಭಾಗವಹಿಸುವಿಕೆ, ವೈವಿಧ್ಯತೆ ಹಾಗೂ ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುತ್ತಾ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಆರೋಗ್ಯ ಶುಶ್ರೂಷೆ ಮುಂತಾದ ಗಂಭೀರ ಕ್ಷೇತ್ರಗಳ ಸಮಸ್ಯೆಗಳನ್ನು ಬಗೆಹರಿಸುತ್ತಾ ರಾಷ್ಟ್ರಾ ಸಾಮಾಜಿಕ ಸ್ವಾಸ್ಥ್ಯದೆಡೆಗೆ ಕ್ವಿಕ್ ಹೀಲ್ ಫೌಂಡೇಶನ್ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.